ನುಡಿಮಲ್ಲಿಗೆ

ನಮ್ಮ ಅದೃಷ್ಟವನ್ನು ನಾವೇ ರೂಪಿಸಿಕೊಳ್ಳುತ್ತೇವೆ. ಮತ್ತು ಅದನ್ನು ವಿಧಿ ಎಂದು ಕರೆಯುತ್ತೇವೆ. **– ಬೆಂಜಮಿನ್ ಡಿಜ್ರೇಲಿ**

ಕಹಿ ಮಾತ್ರೆಗಳು



ಪ್ರತಿನಿತ್ಯ ಹೇಗಾದರೂ ಸಮಯ ಮಾಡಿಕೊಂಡು ನಿಮ್ಮ ಮನೆಯ ಮಾಳಿಗೆಯ ಮೇಲೇರಿ ಹೋಗಿ ಆಕಾಶವನ್ನು ನೋಡಿರಿ ಅದರಲ್ಲಿ ಎಷ್ಟು ವಿವಿಧತೆ ಇದೆ ಎನ್ನುವುದು ತಿಳಿಯುತ್ತದೆ. ಆಕಾಶ ಅನಂತವಾಗಿದೆ. ಮನುಷ್ಯನ ಇಚ್ಛೆಯೂ ಅನಂತವಾಗಿದೆ. ಸೂರ್ಯ ಚಂದ್ರರನ್ನು ನೋಡಿ ಪ್ರತಿನಿತ್ಯವೂ ಪ್ರಕಾಶವನ್ನು ನೀಡುತ್ತಾರೆ. ಆದರೆ ಎಂದೂ ಬಿಲ್ ನೀಡುವುದಿಲ್ಲ, ನಾವು ಕೊಡುವುದರಿಂದ ನಮ್ಮ ವಿಕಾಸವಾಗುತ್ತದೆ. ಮತ್ತು ನಾವು ತೆಗೆದುಕೊಳ್ಳುವುದರಿಂದ ಕೇವಲ ನಮ್ಮ ಜೀವನ ನಿರ್ವಹಣೆಯಾಗುತ್ತದೆ. (ಜೀವನೋಪಾಯ) ಹಾರುತ್ತಿರುವ ಹಕ್ಕಿಗಳನ್ನು ನೋಡಿರಿ ಮತ್ತು ವಿಚಾರ ಮಾಡಿರಿ, ಅವು ಆಕಾಶದಲ್ಲಿ ಹಾರುತ್ತವಾದರೂ ಅವುಗಳ ದೃಷ್ಟಿ ನೆಲದ ಮೇಲಿರುತ್ತದೆ. ಎಷ್ಟೇ ಎತ್ತರಕ್ಕೇರಿದರೂ ನೆಲವನ್ನು ಮಾತ್ರ ಬಿಡಬೇಡಿ. ಸಂಜೆ ಪಶ್ಚಿಮದಲ್ಲಿ ಸೂರ್ಯಾಸ್ತವನ್ನು ನೋಡಿ ಸೂರ್ಯನು ಪಶ್ಚಿಮವನ್ನು ಅನುಸರಿಸಿದನೆಂದು ತಿಳಿಯಿರಿ. ಪರಿಸ್ಥಿತಿ ಅದೇ ಆಗಿದೆ. ನಾವು ಸಹ ಪಾಶ್ಚತ್ಯ ಸಂಸ್ಕೃತಿಯನ್ನು ಅನುಸರಿಸಿದರೆಎಂಥಹ ಸ್ಥಿತಿಯುಂಟಾಗಬಹುದು.

– ಮುನಿಶ್ರೀ ತರುಣಸಾಗರ್‌ಜೀ

ಜೂಜು: 10 ಮಂದಿ ಬಂಧನ

ತುರುವೇಕೆರೆ

ಜೂಜು ಅಡ್ಡೆ ಮೇಲೆ ದಾಳಿ ನಡೆಸಿದ ಪಟ್ಟಣದ ಪೊಲೀಸರು 10 ಮಂದಿ ಹಾಗೂ ಪಣಕಿಟ್ಟಿದ್ದ 13255 ರೂಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಪಟ್ಟಣದ ಸಮೀಪದ ಬೆಳ್ಳಿ ಪೆಟ್ರೋಲ್ ಬಂಕ್ ಹಿಂಭಾಗದಲ್ಲಿನ ಸಿದ್ದೇಶ್ವರಪ್ರವೃತ್ತಿತೋಟದ ಸಾರ್ವಜನಿಕ ರಸ್ತೆಯಲ್ಲಿ ಶುಕ್ರವಾರ ಸಂಜೆ ಜೂಜಿನಲ್ಲಿ ತೊಡಗಿದ್ದಾರೆ. ಎಂಬ ಬಾತ್ಮಿದಾರರ ಮಾಹಿತಿಯನ್ನಾಧರಿಸಿ ಸಿಪಿಐ ರಾಮಚಂದ್ರಪ್ಪ, ಪಿಎಸ್.ಐ ಹೊನ್ನೇಗೌಡ ಹಾಗೂ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ 10 ಜನರ ಜೂಜಿನಲ್ಲಿ ತೊಡಗಿದ್ದವರು ಹಾಗೂ ಪಣಕಿಟ್ಟಿದ್ದ 13255 ರೂಗಳನ್ನು ವಶಕ್ಕೆ ಪಡೆದು ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ರಾಸುಗಳಿಗೆ ಉಚಿತ ಹಸಿ ಮೇವು ವಿತರಣೆ

ಮಧುಗಿರಿ

ಬರಗಾಲದ ಹಿನ್ನೆಲೆಯಲ್ಲಿ ರಾಸುಗಳಿಗೆ ಉಚಿತವಾಗಿ ಹಸಿ ಮೇವು ವಿತರಿಸಲಾಗುವುದೆಂದು ರಂಗಸ್ವಾಮಯ್ಯನವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ.18ನೇ ಭಾನುವಾರದಂದು ಬೆಳಗ್ಗೆ 11 ಗಂಟೆಗೆ ತಾಲ್ಲೂಕಿನ ಪುರವರ ಹೋಬಳಿ ಅರಳೀಮರದ ಹಳ್ಳಿಯಲ್ಲಿ ಉಚಿತವಾಗಿ ಅಗಸೆ ಸೊಪ್ಪನ್ನು ವಿತರಿಸುವ ಕಾರ್ಯಕ್ರಮ ಏರ್ಪಡಿಸಲಾಗಿದೆ. ಆಸಕ್ತ ರೈತರು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು ಮತ್ತು ಮೊದಲು ನೋಂದಾಯಿಸಿದವರಿಗೆ ಮೊದಲ ಆದ್ಯತೆ ನೀಡಲಾಗುವುದು. ನೋಂದಾಯಿಸಿದ ರೈತರುಗಳಿಗೆ ಒಂದು ತೆಂಗಿನ ಸಸಿಯನ್ನು ಸಹ ಉಚಿತವಾಗಿ ವಿತರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ 9482018583 ನಂಬರಿಗೆ ಸಂಪರ್ಕಿಸುವಂತೆ ಕೋರಿದ್ದಾರೆ.

ಭಾಗ್ಯಲಕ್ಷ್ಮಿ ಬಾಂಡ್: ಕನ್ನಡ ಮಾಧ್ಯಮ ಕಡ್ಡಾಯವಲ್ಲ

ತುಮಕೂರು

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಭಾಗ್ಯಲಕ್ಷ್ಮಿ ಯೋಜನೆಯಡಿ ಹೆಣ್ಣು ಮಕ್ಕಳಿಗೆ ಎಲ್.ಐ.ಸಿ. ಬಾಂಡ್‌ಗಳನ್ನು ನೀಡಲಾಗುತ್ತಿದ್ದು, ಬಾಂಡ್ ಪಡೆದಿರುವ ಫಲಾನುಭವಿಗಳು ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಬೇಕೆಂದು ಕಡ್ಡಾಯ ನಿಯಮ ಇರುವುದಿಲ್ಲವಾದ್ದರಿಂದ ಭಾಗ್ಯಲಕ್ಷ್ಮಿ ಯೋಜನೆಯ ಹೆಣ್ಣು ಮಗು ಯಾವುದೇ ಸರ್ಕಾರೇತರ/ ಖಾಸಗಿ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ವಿದ್ಯಾಭ್ಯಾಸಕ್ಕೆ ದಾಖಲಾಗಬಹುದಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಯೋಶ್ರೇಷ್ಠ ಸಮ್ಮಾನ್ 2017 ಪ್ರಶಸ್ತಿಗೆ ಅರ್ಜಿ ಆಹ್ವಾನ

ತುಮಕೂರು

2017–18ನೇ ಸಾಲಿನಲ್ಲಿ ಹಿರಿಯ ನಾಗರಿಕರ ಕ್ಷೇತ್ರದಲ್ಲಿ ಅತ್ಯುತ್ತಮ (ಶಿಕ್ಷಣ, ಸಾಹಿತ್ಯ, ಕಲೆ, ಕಾನೂನು, ಪ್ರತಿಭೆ/ ಕ್ರೀಡೆ, ಸಮಾಜ ಸೇವೆ) ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ವ್ಯಕ್ತಿಗಳಿಂದ / ಸಂಸ್ಥೆಗಳಿಂದ ವಯೋಶ್ರೇಷ್ಠ ಸಮ್ಮಾನ್–2017 ರಾಷ್ಟ್ರ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಹಿರಿಯ ನಾಗರೀಕರು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿ, ಜಿಲ್ಲಾ ಬಾಲ ಭವನ, ಎಂ.ಜಿ.ರಸ್ತೆ, ಇಲ್ಲಿ ಅರ್ಜಿ ನಮೂನೆಯನ್ನು ಪಡೆದು, ದಿನಾಂಕ:19–6–2017 ರೊಳಗೆ ಭರ್ತಿ ಮಾಡಿದ ಅರ್ಜಿ ನಮೂನೆಯೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಕೋರಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂ.ವಾ. 0816–2252763 ಯನ್ನು ಸಂಪರ್ಕಿಸಬಹುದಾಗಿದೆ.

ಸಮಗ್ರ ಕೃಷಿ ಅಭಿಯಾನ ಕಾರ್ಯಕ್ರಮ

ಶಿರಾ

2017–18 ನೇ ಸಾಲಿನಲ್ಲಿ ಸಮಗ್ರ ಕೃಷಿ ಅಭಿಯಾನ ಕಾರ್ಯಕ್ರಮವನ್ನು ಕೃಷಿ ಮತ್ತು ಕೃಷಿ ಸಂಬಂಧಿತ ಎಲ್ಲಾ ಅಭಿವೃದ್ಧಿ ಇಲಾಖೆಗಳ ಸಮನ್ವಯದೊಂದಿಗೆ ಕರ್ನಾಟಕ ಸರ್ಕಾರದ ಮಾರ್ಗಸೂಚಿಯಂತೆ ರೈತರಿಗೆ ಸಮಗ್ರ ಕೃಷಿ ಮಾಹಿತಿಯನ್ನು ನೀಡುವ ವಿಶಿಷ್ಠ ಕಾರ್ಯಕ್ರಮವನ್ನು ಇಲಾಖೆಗಳ ನಡಿಗೆ ರೈತರ ಮನೆ ಬಾಗಿಲಿಗೆ ಎಂಬ ಶೀರ್ಷಿಕೆಯಡಿ ಜು.04 ರವರೆಗೆ ತಾಲ್ಲೂಕಿನ 5 ಹೋಬಳಿಗಳ ವ್ಯಾಪ್ತಿಯ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಹಮ್ಮಿಕೊಳ್ಳಲಾಗುತ್ತಿದೆ ಎಂದು ಸಹಾಯಕ ಕೃಷಿ ನಿರ್ದೇಶಕ ಡಾ॥ನಾಗರಾಜು ತಿಳಿಸಿದ್ದಾರೆ.

ಈ ಕಾರ್ಯಕ್ರಮದಲ್ಲಿ ಕೃಷಿ ಹಾಗೂ ಬೇಸಾಯ ಸಂಬಂಧಿತ ಇಲಾಖೆಗಳ ಸಮನ್ವಯದೊಂದಿಗೆ ಸಮಗ್ರ ಕೃಷಿ ಮಾಹಿತಿಯನ್ನು ರೈತರಿಗೆ ತಲುಪಿಸುವುದು, ವಿಜ್ಞಾನಿಗಳೊಂದಿಗೆ ಸಂವಾದ ಮತ್ತು ಉತ್ಪಾದಕತೆ ಹೆಚ್ಚಿಸುವ ತಾಂತ್ರಿಕತೆಗಳ ಮನವರಿಕೆ ಮುಖ್ಯ ಉದ್ದೇಶವಾಗಿರುತ್ತದೆ. ಮೂರನೆ ದಿನ ಹೋಬಳಿ ಮಟ್ಟದಲ್ಲಿ ಕೃಷಿ ವಸ್ತು ಪ್ರದರ್ಶನ ಹಾಗೂ ಕೃಷಿ ವಿಜ್ಞಾನಿಗಳೊಂದಿಗೆ ರೈತರ ಸಂವಾದ ಕಾರ್ಯಕ್ರಮವನ್ನು ನಡೆಸಲಾಗುತ್ತದೆ.

ಜೂನ್ 21 ರಂದು ಬರಗೂರು ಗ್ರಾಮದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಆವರಣ, 25ರಂದು ತಾವರೇಕೆರೆಯ ಶ್ರೀ ಬಂಡಿ ರಂಗನಾಥಸ್ವಾಮಿ ದೇವಸ್ಥಾನದ ಆವರಣ, 28 ರಂದು ದೊಡ್ಡ ಆಲದ ಮರದ ಎ.ಪಿ.ಎಂ.ಸಿ. ಆವರಣ, ಜುಲೈ 1 ರಂದು ಬುಕ್ಕಾಪಟ್ಟಣದ ಶ್ರೀ ಗಣಪತಿ ಬಯಲುರಂಗ ಮಂದಿರ, ಜುಲೈ 4 ರಂದು ಶಿರಾ ಎ.ಪಿ.ಎಂ.ಸಿ. ಅವರಣದಲ್ಲಿ ಕೃಷಿ ವೇದಿಕೆಯ ಕಾರ್ಯಕ್ರಮಗಳು ನಡೆಯಲಿದ್ದು ರೈತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಸಹಾಯಕ ಕೃಷಿ ನಿರ್ದೇಶಕ ಡಾ॥ನಾಗರಾಜು ಮನವಿ ಮಾಡಿದ್ದಾರೆ.

ನಿತ್ಯ ಭವಿಷ್ಯ

ದಿನಾಂಕ: 19-06-2017 ಸೋಮವಾರ
ತಿಥಿ: ದಶಮಿ ನಕ್ಷತ್ರ: ರೇವತಿ
ಅದೃಷ್ಟ ಸಂಖ್ಯೆ: 4
ಇಂದಿನ ವಿಶೇಷ
ಸೋಮದಶಮಿ

ಮೇಷ	: ಉಡುಗೊರೆ
ವೃಷಭ	: ಸಂತೃಪ್ತಿ
ಮಿಥುನ	: ವೃತ್ತಿ ಪ್ರಶಂಸೆ
ಕಟಕ	: ಪ್ರವಾಸ
ಸಿಂಹ	: ಆತಂಕ
ಕನ್ಯಾ	: ವ್ಯಕ್ತಿ ಭೇಟಿ
ತುಲಾ	: ಸಂತಸವಾರ್ತೆ
ವೃಶ್ಚಿಕ	: ರಾಜಕಾರ್ಯ
ಧನಸ್ಸು	: ನೆಮ್ಮದಿ
ಮಕರ	: ಪುರಸ್ಕಾರ
ಕುಂಭ	: ಸಮಾಧಾನವಿರಲಿ
ಮೀನ	: ಮುನ್ನಡೆ

ನೀರು ಅಮೂಲ್ಯ
ಮಿತವಾಗಿ ಬಳಸಿ

ರೋಜಾ ಇಫ್ತಿಯಾರ್ ಕೂಟದಲ್ಲಿ ಜೆಡಿಎಸ್ ಮುಖಂಡ ಭಾಗಿ

ತಿಪಟೂರು

ಮುಸ್ಲಿಮರ ಪವಿತ್ರ ರಂಜಾನ್ ಆರಂಭವಾದ ಹಿನ್ನೆಲೆಯಲ್ಲಿ ಗಾಂಧಿನಗರದ ಮದೀನ ಮಸೀದಿಯಲ್ಲಿ ಏರ್ಪಡಿಸಲಾಗಿದ್ದ ರೋಜಾ ಇಫ್ತಿಯಾರ್ ಕೂಟದಲ್ಲಿ ಭಾಗವಹಿಸಿದ್ದ ಜೆಡಿಎಸ್ ಮುಖಂಡ ಹಾಗೂ ಸಮಾಜ ಸೇವಕ ಕೆ.ಟಿ.ಶಾಂತಕುಮಾರ್ ಮುಸ್ಲಿಂ ಬಾಂಧವರೊಂದಿಗೆ ಫಲಹಾರ ಸೇವಿಸಿ ರಂಜಾನ್ ಶುಭಾಶಯ ಕೋರಿದರು.

ನಂತರ ಮಾತನಾಡಿದ ಅವರು ಮುಸ್ಲಿಮರಿಗೆ ರಂಜಾನ್ ಮಾಸಾಚರಣೆ ಅತ್ಯಂತ ಪವಿತ್ರವಾದ ದಿನವಾಗಿದ್ದು ನಾಡಿನ ಸುಭಿಕ್ಷತೆ ಹಾಗೂ ಶಾಂತಿ ಸೌಹಾರ್ದತೆಗಾಗಿ ರಂಜಾನ್ ಮಾಸದಲ್ಲಿ ಪ್ರಾರ್ಥನೆ ಸಲ್ಲಿಸುವ ಮುಸಲ್ಮಾನರು ಅತ್ಯಂತ ಕಠಿಣ ವ್ರತಾಚರಣೆಯಲ್ಲಿ ತೊಡಗುತ್ತಾರೆ. ಮುಸಲ್ಮಾನರು ಅಲ್ಲಾನನ್ನೂ ಪ್ರಾರ್ಥಿಸುತ್ತಾರೆ ಎಂದ ಅವರು, ಮನುಷ್ಯನಲ್ಲಿ ಹೆಣ್ಣು ಗಂಡು ಎರಡೇ ಜಾತಿ. ಜಾತಿಯ ಹೆಸರಿನಲ್ಲಿ ಸಮಾಜವನ್ನು ವಿಘಟಿಸುವ ಬದಲು ಒಗ್ಗೂಡಿಸುವ ಕೆಲಸವಾಗಬೇಕು, ನಾಡಿನ ಅಭಿವೃದ್ಧಿ ಶಾಂತಿ ಸೌಹಾರ್ದತೆಗಾಗಿ ದೇವರಲ್ಲಿ ಪ್ರಾರ್ಥಿಸಿ ಉಪವಾಸ ಆಚರಿಸುತಿರುವ ಮುಸಲ್ಮಾನ್ ಬಂಧುಗಳಿಗೆ ದೇವರು ಒಳ್ಳೆಯದು ಮಾಡಲಿ ಎಂದು ತಿಳಿಸಿದರು.ನಾನು ಇದೇ ತಾಲ್ಲೂಕಿನಲ್ಲಿ ಹುಟ್ಟಿ ಬೆಳೆದಿದ್ದು, ಹುಟ್ಟಿದ ಮಣ್ಣಿನ ಋಣ ತೀರಿಸುವ ಸಲುವಾಗಿ ಸಮಾಜ ಸೇವೆಯಲ್ಲಿ ತೊಡಗಿದ್ದು, ತಾಲ್ಲೂಕಿನ ಜನರ ಆಶೀರ್ವಾದ ಬೇಕಿದೆ. ಮುಸಲ್ಮಾನರ ಸೋದರತೆ ಸ್ನೇಹದ ಪ್ರತೀಕವಾದ ಇಫ್ತಿಯಾರ್ ಕೂಟದಲ್ಲಿ ಭಾಗವಹಿಸಿರುವುದು ಸಂತೋಷದ ವಿಷಯ ಎಂದರು.

ಗಾಂಧಿನಗರದ ಮದೀನ ಮಸೀದಿ ಮುತ್ವಲೀ ಮಹಮದ್ ದಸ್ತಗೀರ್ ಮಾತನಾಡಿ ದೇಶದಲ್ಲಿ ಶಾಂತಿ ಸಮೃದ್ಧಿಗಾಗಿ ಮಳೆಬೆಳೆಗಾಗಿ ದೇಶದಲ್ಲಿ ಸರ್ವರ ಅಭಿವೃದ್ಧಿಗಾಗಿ ರಂಜಾನ್ ಮಾಸಾಚರಣೆಯಲ್ಲಿ ಅಲ್ಲಾನಲ್ಲಿ ಪ್ರಾರ್ಥಿಸಲಾಗುತ್ತದೆ. ರಂಜಾನ್ ಮಾಸ ಪ್ರತಿಯೊಬ್ಬ ಮುಸಲ್ಮಾನರ ಪವಿತ್ರ ದಿನವಾಗಿದ್ದು ಕಠಿಣ ಉಪವಾಸ ವ್ರತಾಚರಣೆ ಮೂಲಕ ದೇವರನ್ನು ಮೆಚ್ಚಿಸುವ ಕಾರ್ಯ ಮಾಡಲಾಗುತ್ತದೆ. ರಂಜಾನ್ ಆಚರಣೆ ಚಂದ್ರನ ದರ್ಶನದಿಂದ ಆರಂಭವಾಗಿ 30 ದಿನಗಳ ಕಾಲ ಕಠಿಣ ಉಪವಾಸ ಹಾಗೂ ಪವಿತ್ರ ಗ್ರಂಥ ಖುರಾನ್ ಪಠಣ ಮಾಡಲಾಗುತ್ತದೆ. ಚಂದ್ರನ ದರ್ಶನದ ಮೂಲಕ ಉಪವಾಸ ಅಂತ್ಯಗಳಿಸಲಾಗುತ್ತದೆ. ಜಗತ್ತಿನಾದ್ಯಂತ ಎಲ್ಲಾ ಮುಸಲ್ಮಾನರಿಂದ ಒಂದೇ ದಿನ ಉಪವಾಸ ಕೈಗೊಂಡು ಒಂದೇ ದಿನ ಉಪವಾಸ ಅಂತ್ಯಗೊಳಿಸಲಾಗುತ್ತದೆ ಎಂದರು.

ಇಫ್ತಿಯಾರ್ ಕೂಟದಲ್ಲಿ ಗಾಂಧಿನಗರದ ಮದೀನ ಮಸೀದಿ ಮುತ್ವಲೀ ಮಹಮದ್ ದಸ್ತಗೀರ್,ನಾಯಾಜ್ ಮುತ್ವಲೀ, ಮಹಮದ್ ಮೆಹಬೂಬ್, ಹಾಜಿ ಮಝರ್ ಸಾಬ್, ಮಹಮದ್ ಷಫಿ, ನಾಸಿಕ್‌ಖಾನ್ ಮುಂತಾದವರು ಉಪಸ್ಥಿತರಿದ್ದರು. ಇಫ್ತಿಯಾರ್ ಕೂಟದಲ್ಲಿ ನಗರ ಸಭೆ ಅಧ್ಯಕ್ಷ ಟಿ.ಎನ್.ಪ್ರಕಾಶ್, ನಯಾಜ್ ಖಾನ್, ವಕ್ಫ್ ಮಂಡಳಿ ಸದಸ್ಯ ಮಹಮದ್ ಜುಬೇರ್, ಎಸ್. ಷಮೀ ಉಲ್ಲ ಷರೀಫ್, ಮಹಮದ್ ಮಜ್ಜುದ್, ಮಹಬೂಬ್ ಪಾಷ ಟಿ.ಕೆ, ತನ್ವೀರ್ ಮುಂತಾದವರು ಉಪಸ್ಥಿತರಿದ್ದರು.

ಜಿಲ್ಲಾ ಬ್ರಾಹ್ಮಣಸಭಾದ ವೆಬ್‌ಸೈಟ್‌ಗೆ ಚಾಲನೆ

ತುಮಕೂರು

ತುಮಕೂರು ಜಿಲ್ಲಾ ಬ್ರಾಹ್ಮಣ ಸಭಾದ ವೆಬ್‌ಸೈಟ್‌ಆರಂಭವಾಗಿದ್ದು, (ವೆಬ್‌ಸೈಟ್: tumakurujillabramhanasabha.org) ಇದರ ವಿಧ್ಯುಕ್ತ ಉದ್ಘಾಟನೆಯನ್ನು ಜಿಲ್ಲಾ ವಿಪ್ರ ಬಾಂಧವರ ಸಮಾವೇಶದ ಪ್ರಧಾನ ಉಸ್ತುವಾರಿ ಸಮಿತಿಯ ಮಹಾಪೋಷಕರಾದ ಆಡಿಟರ್ ಕೆ.ನರಸಿಂಹಮೂರ್ತಿ ಮತ್ತು ಪ್ರಸಿದ್ಧ ಶಿಕ್ಷಣ ತಜ್ಞ ಸಿ.ವಿ.ಕೇಶವಮೂರ್ತಿ ಅವರು ತುಮಕೂರಿನಲ್ಲಿ ನಡೆದ ಸರಳ ಸಮಾರಂಭದಲ್ಲಿ ನೆರವೇರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಬ್ರಾಹ್ಮಣಸಭಾ ಅಧ್ಯಕ್ಷ ಎನ್.ಆರ್ .ನಾಗರಾಜರಾವ್ ಮತ್ತು ತಂತ್ರಜ್ಞ ರಾಘವೇಂದ್ರ ಹಾಜರಿದ್ದರು.

ಕೆ.ನರಸಿಂಹಮೂರ್ತಿರವರು ಮಾತನಾಡಿ ಜಿಲ್ಲಾ ಬ್ರಾಹ್ಮಣಸಭಾದ ಪ್ರಗತಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ವೆಬ್‌ಸೈಟ್ ಆರಂಭಕ್ಕೆ ಸಂತೋಷ ವ್ಯಕ್ತಪಡಿಸಿ ಬ್ರಾಹ್ಮಣಸಭಾ ಇಡೀ ಜಿಲ್ಲೆಯ ಎಲ್ಲಾ ಬ್ರಾಹ್ಮಣರನ್ನು ಒಳಗೊಂಡು ಸಮೂಹದ ಆಶೋತ್ತರಗಳಿಗೆ ಸ್ಪಂದಿಸಲಿ, ಒಟ್ಟಾರೆ ಸಮಾಜದ ಅಭಿವೃದ್ಧಿಗೆ ಶ್ರಮಿಸಲಿ ಎಂದು ಆಶಿಸಿದರು.

ವೆಬ್‌ಸೈಟ್ ರೂಪಿಸುವಲ್ಲಿ ಪ್ರಧಾನ ಪಾತ್ರವಹಿಸಿದ ಸಿ.ವಿ.ಕೇಶವಮೂರ್ತಿಯವರು ಮಾತನಾಡಿ ಸ್ವಂತಿಕೆ ಉಳಿಸಿಕೊಂಡು ಆಯಾಕಾಲದ ಸ್ಥಿತ್ಯಂತರಗಳಿಗೆ ಹೊಂದಿಕೊಂಡು ಹೋಗುವವರೆ ಸದಾ ಯಶಸ್ಸು ಗಳಿಸುವುದಕ್ಕೆ ಸಾಧ್ಯವಿರುವುದರಿಂದ, ಅದಕ್ಕೆ ತಕ್ಕಂತೆ ಕಾರ್ಯವಿಧಾನ ರೂಪಿಸಿಕೊಳ್ಳಬೇಕಾದ ಅವಶ್ಯಕತೆ ಇದೆ. ವೆಬ್‌ಸೈಟ್ ನಿಂದ ವಿಶ್ವದೆಲ್ಲೆಡೆಯ ವಿಪ್ರರನ್ನು ಸಂಪರ್ಕಿಸಲು ಸಾಧ್ಯವಾಗಿದ್ದು, ವಿಪ್ರ ಸಂಸ್ಕಾರ ಮತ್ತು ಚಿಂತನೆಗಳನ್ನು ಹಂಚಿಕೊಳ್ಳಲು ಅವಕಾಶವಾಗುತ್ತದೆ ಎಂದು ವಿವರಿಸಿದರು.

ವೆಬ್‌ಸೈಟ್ ನಿರ್ಮಾಣದಲ್ಲಿ ಶ್ರಮ ವಹಿಸಿರುವ ಸಿರಿನಾಡು ಮಹಾಸಭಾ ಜಿಲ್ಲಾಅಧ್ಯಕ್ಷ ಎಂ.ಹೆಚ್.ಮಂಜುನಾಥ್‌ಅವರು ವೆಬ್‌ಸೈಟ್‌ನಲ್ಲಿ ವಿಪ್ರರ ಬಗ್ಗೆ ಮತ್ತು ಜಿಲ್ಲಾ ಬ್ರಾಹ್ಮಣಸಭಾ ಬಗ್ಗೆ ಹೆಚ್ಚಿನ ಮಾಹಿತಿ ನೀಡಲು ವ್ಯವಸ್ಥೆ ಮಾಡಲಾಗಿದ್ದು, ವೆಬ್‌ಸೈಟ್‌ಗೆ ಆರಂಭದಲ್ಲಿಯೇ ಉತ್ತಮ ಪ್ರತಿಕ್ರಿಯೆ ಬಂದಿರುವುದು ಸಂತೋಷದ ವಿಷಯ ಎಂದು ತಿಳಿಸಿದರು.

ಉತ್ತಮ ಶಿಕ್ಷಣ ಪಡೆದಲ್ಲಿ ಉಜ್ವಲ ಭವಿಷ್ಯ

ದೊಡ್ಡೇರಿ

ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಉತ್ತಮ ಶಿಕ್ಷಣ ಪಡೆದು ವಿದ್ಯೆಯನ್ನುಗಳಿಸಿಕೊಂಡು ತಮ್ಮ ಗುರಿಯನ್ನು ತಲುಪಲು ಸಾಧ್ಯ ಹಾಗೂ ತಂದೆ ಮತ್ತು ತಾಯಿಯನ್ನು ಗೌರವಿಸುವುದರ ಮೂಲಕ ತಮ್ಮ ಮುಂದಿನ ಉಜ್ವಲ ಭವಿಷ್ಯವನ್ನು ಕಾಣಲು ಸಾಧ್ಯ ಎಂದು ಜಿ.ಪಂ.ಸದಸ್ಯ ಹೂವಿನ ಚೌಡಪ್ಪ ತಿಳಿಸಿದರು.

ಅವರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯ ಆವರಣದಲ್ಲಿ ಹಮ್ಮಿಕೊಂಡಿದ್ದ ಜಿ.ಪಂ ತುಮಕೂರು ಹಾಗೂ ತಾ.ಪಂ. ಮಧುಗಿರಿ ಮತ್ತು ಗ್ರಾ.ಪಂ.ವತಿಯಿಂದ ಸರ್ಕಾರದಿಂದ ಬರುವ ಹದಿನಾಲ್ಕನೆ ಹಣಕಾಸಿನ ಬಳಕೆಯಿಂದ ಸರ್ಕಾರಿ ಶಾಲೆ ಹಾಗೂ ಅನುದಾನಿತ ಶಾಲೆಗಳ ಒಂದರಿಂದ ಹತ್ತನೆ ತರಗತಿಯ ಶಾಲಾಮಕ್ಕಳಿಗೆ ಉಚಿತವಾಗಿ ನೀಡಿರುವ ನೋಟ್ ಪುಸ್ತಕ ವಿತರಣಾ ಕಾರ್ಯಕ್ರಮದ ಮುಖ್ಯಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು ಕರ್ನಾಟಕ ರಾಜ್ಯದ 224 ವಿಧಾನಸಭಾಕ್ಷೇತ್ರದಲ್ಲಿ ಎಲ್ಲಿಯೂ ಅಗದಂತಹ ಹೊಸ ಹೊಸ ಯೋಜನೆಗಳನ್ನು ರೂಪಿಸಿ ಕ್ಷೇತ್ರದಲ್ಲಿ ಪ್ರತಿಯೊಬ್ಬರಿಗೂ ಅನುಕೂಲಕರವಾಗುವಂತೆ ಮಾಡುತ್ತಿರುವ ಶಾಸಕರೆಂದರೆ ಸಹಕಾರಿ ರತ್ನ ಎಂದೆ ಹೆಸರುವಾಸಿಯಾಗಿರುವ ರಾಜಣ್ಣ ನವರು. ಗ್ರಾಮೀಣ ಪ್ರದೇಶದ ಬಡಕುಟುಂಬದ ವಿದ್ಯಾರ್ಥಿಗಳ ವಿದ್ಯಾರ್ಥಿ ಜೀವನ ಕುಂಟಿತವಾಗದೆ ಉನ್ನತ ವಿಧ್ಯಾಭ್ಯಾಸ ಪಡೆಯಲಿ ಎಂಬ ಬಯಕೆಯಿಂದ ವಿದ್ಯಾರ್ಥಿಗಳಿಗೆ ಅನೇಕ ತರಹದ ಯೋಜನೆಗಳನ್ನು ಜಾರಿಗೆ ತಂದಿದ್ದು ಯಶ್ವಸಿಗೊಳಿಸುತಿದ್ದಾರೆ. ಇವರ ಪರಿಶ್ರಮಕ್ಕೆ ತಕ್ಕಂತೆ ವಿದ್ಯಾರ್ಥಿಗಳು ಉತ್ತಮ ವಿದ್ಯಾಭ್ಯಾಸಮಾಡಿ ಒಳ್ಳೆಯ ಪದವಿ ಪಡೆದು ಇವರ ಶ್ರಮಕ್ಕೆ ತಂಕ್ಕಂತೆ ವಿಧ್ಯಾಭ್ಯಾಸ ಮಾಡಬೇಕೆಂದು ಸಲಹೆ ನೀಡಿದರು. ಈ ಸಂದರ್ಬದಲ್ಲಿ ದೊಡ್ಡೇರಿ ಗ್ರಾ.ಪಂ ಅಧ್ಯಕ್ಷರಾದ ಲಕ್ಷ್ಮೀದೇವಮ್ಮನವರು ಅಧ್ಯಕ್ಷತೆ ವಹಿಸಿದರು ಎಸ್.ಡಿ.ಎಮ್.ಸಿ ಅಧ್ಯಕ್ಷ ಕಣಿಮಯ್ಯ ಹಾಗೂ ತಾ.ಪಂ ಸದಸ್ಯ ಪ್ರಸನ್ನ ಕುಮಾರ್ ಗ್ರಾ.ಪಂ ಸದಸ್ಯರುಗಳಾದ ಚಂದ್ರಶೇಕರ್, ನಿಂಗೇಗೌಡ ಹಾಗೂ ಅಭಿವೃದ್ಧಿ ಅಧಿಕಾರಿ ಯೋಗ ಶ್ರೀನಿವಾಸ್ ಶಾಲೆಯ ಮುಖ್ಯಶಿಕ್ಷರಾದ ನರಸಪ್ಪ ಪಾಪಣ್ಣ ಹಾಗೂ ಶಿಕ್ಷಕರುಗಳು ಶಾಲಾ ವಿಧ್ಯಾರ್ಥಿಗಳು ಸಾರ್ವಜನಿಕರು ಹಾಜರಿದ್ದರು

ಎತ್ತಿನ ಹೊಳೆ ಯೋಜನೆ: ಭೂಸ್ವಾಧೀನ ಗ್ರಾಮಗಳಲ್ಲಿ ಇಂದಿನಿಂದ ಸಭೆಗಳು

ತುಮಕೂರು

ಎತ್ತಿನ ಹೊಳೆ ಕುಡಿಯುವ ನೀರಿನ ಯೋಜನೆಗೆ ಸಂಬಂಧಿಸಿದಂತೆ ಎತ್ತಿನ ಹೊಳೆ ಯೋಜನೆ ನಿರ್ಮಾಣಕ್ಕೆ ತುಮಕೂರು ಜಿಲ್ಲೆ ಗುಬ್ಬಿ ಹಾಗೂ ತುರುವೇಕೆರೆ ತಾಲ್ಲೂಕುಗಳ 25 ಗ್ರಾಮಗಳ ಜಮೀನು ಭೂಸ್ವಾಧೀನವಾಗಲಿದ್ದು, ಸದರಿ ಜಮೀನುಗಳಿಗೆ ಭೂ ಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರ ಹಕ್ಕು, ಪುನರ್‌ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ) ನಿಯಮಾವಳಿ–2015ರ ನಿಯಮ 03 ರಂತೆ ಸಾಮಾಜಿಕ ಪರಿಹಾರ ನಿರ್ಧರಣೆಯನ್ನು ಮಾಡಿದ್ದು, ಈ ಕಾರ್ಯವನ್ನು ನಿರ್ವಹಿಸಿರುವ ಜಿ.ಜಿ.ವಿ. ಎಜುಕೇಷನ್ ಅಂಡ್ ರೂರಲ್ ಡೆವಲಪ್‌ಮೆಂಟ್ ಸೊಸೈಟಿ ಮತ್ತು ಜಿ.ಜಿ.ವಿ. ಎಂಟರ್‌ಪ್ರೈಸಸ್, ತುಮಕೂರು ರವರು ಸಾಮಾಜಿಕ ಪರಿಣಾಮದ ಅಧ್ಯಯನವನ್ನು ಪೂರ್ಣಗೊಳಿಸಿ ಕರಡು ವರದಿಯನ್ನು ತಯಾರಿಸಿದ್ದು, ಗ್ರಾಮಸಭೆಗಳಲ್ಲಿ ವರದಿಯ ಅಂಶಗಳನ್ನು ಚರ್ಚಿಸಲಿದ್ದಾರೆ.

ಗುಬ್ಬಿ ತಾಲ್ಲೂಕಿನ ಚೇಳೂರು ಹೋಬಳಿಯ ನಲ್ಲೂರು ಅಂಕಸಂದ್ರ ಗ್ರಾಮ ಪಂಚಾಯತಿಗೆ ಒಳಪಡುವ ಮಲೆಮಾಚನಕುಂಟೆ, ಮಾರನಹಳ್ಳಿ, ಅಂತಾಪುರ, ಸಣಬನಹಳ್ಳಿ, ತಾಳೇಕೊಪ್ಪ ಗ್ರಾಮಗಳ ಸಭೆಯು ದಿನಾಂಕ: 19–6–2017ರಂದು ಬೆಳಿಗ್ಗೆ 10 ಗಂಟೆಗೆ ಸಣಬನಹಳ್ಳಿ ದೇವಸ್ಥಾನದ ಹತ್ತಿರ ನಡೆಯಲಿದೆ. ಹಾಗಲವಾಡಿ ಹೋಬಳಿಯ ಹೊಸಕೆರೆ, ಶಿವಪುರ ಗ್ರಾಮಪಂಚಾಯತಿ ವ್ಯಾಪ್ತಿಗೆ ಬರುವ ಹೊಸಕೆರೆ, ಮಾದೇನಹಳ್ಳಿ, ಪಿನ್ನೇನಹಳ್ಳಿ, ವರ್ತಿಕಟ್ಟೆ ಗ್ರಾಮಗಳ ಸಭೆಯು ದಿನಾಂಕ:19–6–2017 ರಂದು ಮಧ್ಯಾಹ್ನ 2 ಗಂಟೆಗೆ ಹೊಸಕೆರೆ ಶ್ರೀ ರಂಗನಾಥಸ್ವಾಮಿ ದೇವಸ್ಥಾನದ ಆವರಣದಲ್ಲಿ ನಡೆಯಲಿದೆ. ನಿಟ್ಟೂರು ಹೋಬಳಿಯ ಅಳಿಲುಘಟ್ಟ, ಎಂ.ಎನ್.ಕೋಟೆ, ತ್ಯಾಗಟೂರು ಗ್ರಾಮಪಂಚಾಯತಿ ವ್ಯಾಪ್ತಿಯ ಯರೇಕಾವಲ್, ಬಂಡನಹಳ್ಳಿ, ವೀರಾಪುರ, ಶೆಟ್ಟಿಹಳ್ಳಿ, ತಿಮ್ಮಲಾಪುರ ಗ್ರಾಮಗಳ ಸಭೆಯು ದಿನಾಂಕ:20–6–2017ರಂದು ಬೆಳಿಗ್ಗೆ 10 ಗಂಟೆಗೆ ಅಳಿಲುಘಟ್ಟ ಅರಳೀಕಟ್ಟೆ ಹತ್ತಿರ ನಡೆಯಲಿದೆ. ತುರುವೇಕೆರೆ ತಾಲ್ಲೂಕು ದಂಡಿನ ಶಿವರ ಹೋಬಳಿಯ ಹಡವನಹಳ್ಳಿ ಗ್ರಾಮಪಂಚಾಯತಿ ವ್ಯಾಪ್ತಿಗೆ ಬರುವ ಹಡವನಹಳ್ಳಿ, ಹೊನ್ನೇನಹಳ್ಳಿ ಗ್ರಾಮಗಳ ಸಭೆಯು ದಿನಾಂಕ: 20–6–2017ರಂದು ಮ.2 ಗಂಟೆಗೆ, ಹಡವನಹಳ್ಳಿ ಗ್ರಾ.ಪಂ. ಆವರಣದಲ್ಲಿ ನಡೆಯಲಿದೆ. ಗುಬ್ಬಿ ತಾಲ್ಲೂಕಿನ ನಿಟ್ಟೂರು ಹೋಬಳಿಯ ದೊಡ್ಡಗುಣಿ ಗ್ರಾಮಪಂಚಾಯತಿ ವ್ಯಾಪ್ತಿಯ ಹಂಡನಹಳ್ಳಿ, ಹಿಂಡಿಗಾನಹಳ್ಳಿ, ವಿರುಪಾಕ್ಷಪುರ, ಯಲ್ಲಾಪುರ, ಬೊಮ್ಮರಸನಹಳ್ಳಿ ಗ್ರಾಮಗಳ ಸಭೆಯು ಹಂಡನಹಳ್ಳಿ ನರಸಿಂಹಸ್ವಾಮಿ ದೇವಸ್ಥಾನದ ಹತ್ತಿರ ದಿನಾಂಕ:21–6–2017 ರಂದು ಬೆಳಿಗ್ಗೆ 10 ಗಂಟೆಗೆ ಹಾಗೂ ನೇರಳೇಕೆರೆ, ಕಂಚಿಗಾನಹಳ್ಳಿ, ದೊಡ್ಡಗುಣಿ, ಎನ್. ಹೊಸಹಳ್ಳಿ ಗ್ರಾಮಗಳ ಸಭೆಯು ನೇರಳೇಕೆರೆ ಅರಳೀಮರದ ಹತ್ತಿರ ದಿನಾಂಕ:21–6–2017 ರಂದು ಮಧ್ಯಾಹ್ನ 2 ಗಂಟೆಗೆ ನಡೆಯಲಿದೆ. ಈ ಕಾರ್ಯವನ್ನು ಸದರಿಯವರು ತಮ್ಮ ತಂಡದೊಂದಿಗೆ ನಡೆಸಲಿದ್ದು, ಭೂಸ್ವಾಧೀನಕ್ಕೊಳಪಡುವ ಕುಟುಂಬಗಳು ಸದರಿ ದಿನಾಂಕಗಳಂದು ಗ್ರಾಮಸಭೆಗೆ ಹಾಜರಾಗಲು ಅಪರ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಾಲ ಕಾರ್ಮಿಕ ತರಬೇತಿ ಸ್ವಯಂ ಸೇವಾ ಸಂಸ್ಥೆಗಳಿಂದ ಪ್ರಸ್ತಾವನೆ ಆಹ್ವಾನ

ತುಮಕೂರು

ಜಿಲ್ಲಾ ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ಸಂಘವು ಜಿಲ್ಲೆಯಲ್ಲಿ 5 ಬಾಲಕಾರ್ಮಿಕ ವಿಶೇಷ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಲು ಉದ್ದೇಶಿಸಿದ್ದು, ಆಸಕ್ತ ಸ್ವಯಂ ಸೇವಾ ಸಂಸ್ಥೆಗಳಿಂದ ಪ್ರಸ್ತಾವನೆ ಆಹ್ವಾನಿಸಿದೆ.

ಅರ್ಜಿ ಸಲ್ಲಿಸುವ ಸಂಘ ಸಂಸ್ಥೆಗಳು ರಿಜಿಸ್ಟ್ರೇಷನ್ ಆಕ್ಟ್ 1960ರ ಪ್ರಕಾರ ನೋಂದಣಿಯಾಗಿ 3 ವರ್ಷ ಪೂರ್ಣಗೊಂಡಿರಬೇಕು. ಬಾಲ ಕಾರ್ಮಿಕ ಮಕ್ಕಳ ಬಗ್ಗೆ ಜನಜಾಗೃತಿ ಮತ್ತು ಇತರ ಕಾರ್ಯ ಚಟುವಟಿಕೆಗಳನ್ನು ನಡೆಸಿರುವ ಸ್ವಯಂ ಸೇವಾ ಸಂಸ್ಥೆಗಳಿಗೆ ಆದ್ಯತೆ ನೀಡಲಾಗುವುದು. ಸ್ವಯಂ ಸೇವಾ ಸಂಸ್ಥೆಗಳಲ್ಲಿ 50000 ರೂ.ಗಳಿಗಿಂತ ಹೆಚ್ಚಿನ ಹಣಕಾಸಿನ ಸಾಮರ್ಥ್ಯದ ಬಗ್ಗೆ ಬ್ಯಾಂಕಿನಲ್ಲಿ ಠೇವಣಿ ಇಡಬೇಕು. ಈ ಹಿಂದೆ ಬಾಲಕಾರ್ಮಿಕ ಶಾಲೆ ನಡೆಸಿ ರದ್ದಾದ ಹಾಗೂ ಈಗಾಗಲೇ ಬಾಲಕಾರ್ಮಿಕ ಶಾಲೆ ನಡೆಸುತ್ತಿರುವವರು ಪ್ರಸ್ತಾವನೆಯನ್ನು ಸಲ್ಲಿಸಲು ಅರ್ಹರಲ್ಲ, ಪ್ರಸ್ತಾವನೆಗಳನ್ನು ಸಲ್ಲಿಸುವವರು ಮೂರು ವರ್ಷದ ಆಡಿಟ್ ವರದಿ ಮಾಡಿಸಿರಬೇಕು ಹಾಗೂ ಸಂಸ್ಥೆಯನ್ನು ನವೀಕರಣಗೊಳಿಸಿರಬೇಕು. ಅರ್ಜಿಯೊಂದಿಗೆ 3 ವರ್ಷದಲ್ಲಿ ನಡೆಸಿದ ಕಾರ್ಯಕ್ರಮಗಳ ಮಾಹಿತಿಯನ್ನು ಲಗತ್ತಿಸಬೇಕು.

ಆಸಕ್ತ ಸ್ವಯಂ ಸೇವಾ ಸಂಸ್ಥೆಗಳು ತಮ್ಮ ಪ್ರಸ್ತಾವನೆಗಳನ್ನು ಜೂನ್ 30ರ ಸಂಜೆ 4 ಗಂಟೆಯೊಳಗಾಗಿ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ತುಮಕೂರು ಜಿಲ್ಲಾ ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನಾ ಸೊಸೈಟಿ, ಡಿ.ಡಿ.ಎಲ್.ಆರ್. ಕಛೇರಿ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮಿನಿ ವಿಧಾನಸೌಧ, ತುಮಕೂರು ಇವರಿಗೆ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿ ಕೆ.ಪಿ. ಮೋಹನ್‌ರಾಜ್ ತಿಳಿಸಿದ್ದಾರೆ.

ದಬ್ಬಗುಂಟೆ : ಹಳ್ಳಿಯಲ್ಲಿ ಒಂದು ದಿನ

ಹುಳಿಯಾರು

ಹುಳಿಯಾರು ಹೋಬಳಿಯ ದಬ್ಬಗುಂಟೆ ಗ್ರಾಮದಲ್ಲಿ ಜಲವೇ ಜೀವನ ನಬಾರ್ಡ್ ಜಲ ಅಭಿಯಾನದ ಹಳ್ಳಿಯಲ್ಲಿ ಒಂದು ದಿನ ಕಾರ್ಯಕ್ರಮ ನಡೆಯಿತು.

ನಬಾರ್ಡ್ ಪ್ರಾಯೋಜಕತ್ವದ ಈ ಕಾರ್ಯಕ್ರಮದಲ್ಲಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಜಲದೂತರು ಮತ್ತು ಸಹಾಯಕರು, ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು. ನಂತರ ಜಲ ಸಂವಾದದಲ್ಲಿ ಪಾಲ್ಗೊಂಡು ಅನಂತರ ನಕ್ಷೆ ತಯಾರಿಸಿದರು. ಜಲಸಂರಕ್ಷಣೆ ಪ್ರತಿಜ್ಞೆ ಮಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಅಧ್ಯಕ್ಷತೆ ವಹಿಸಿದ್ದರು. ಗ್ರಾಮ ಪಂಚಾಯಿತಿ ಸದಸ್ಯರಾದ ಮೋಹನ್ ಉದ್ಘಾಟಿಸಿದರು. ಹಿರಿಯ ಪ್ರಾಥಮಿಕ ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಲೋಕೇಶ್. ಶಿವಕುಮಾರ್ ಮತ್ತು ರಾಮಕೃಷ್ಣಪ್ಪ ಜಲ ಸಂವಾದ ನಡೆಸಿದರು.

ಮುಖ್ಯಶಿಕ್ಷಕ ಈರಸಿದ್ದಯ್ಯ ಕೋದಂಡಯ್ಯ. ರಂಗನಾಥ್. ಗ್ರಾಮದ ಮಹಿಳೆಯರು ಸೇರಿದಂತೆ ನೂರಾರು ಜನರು, ಮಕ್ಕಳು, ಮಕ್ಕಳ ಮನೆ ಪೋಷಕರು ಭಾಗವಹಿಸಿದ್ದರು.

ಇಂದು ನೂತನ ಶಾಖೆ ಉದ್ಘಾಟನೆ

ತುಮಕೂರು

ಕೊರಟಗೆರೆಯಲ್ಲಿ ಜೂನ್ 19 ರಂದು ಬೆಳಿಗ್ಗೆ 9–30 ಗಂಟೆಗೆ ಶ್ರೀ ಕನಕ ಪತ್ತಿನ ಸಹಕಾರ ಸಂಘದ ಉದ್ಘಾಟನಾ ಸಮಾರಂಭ ಜರುಗಲಿದೆ. ಶಿರಾ ತಾಲ್ಲೂಕು ಶ್ರೀ ಕನಕ ಪತ್ತಿನ ಸಹಕಾರ ಸಂಘದಿಂದ ನೂತನ 6 ನೇ ಶಾಖೆ ಪ್ರಾರಂಭೋತ್ಸವ ನಡೆಯಲಿದ್ದು ಕಾಗಿನೆಲೆ ಹೊಸದುರ್ಗ ಶಾಖಾ ಮಠದ ಶ್ರೀ ಈಶ್ವರಾನಂದ ಪುರಿ ಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಲಿದ್ದಾರೆ, ಶಾಸಕ ಸುಧಾಕರ ಲಾಲ್ ಸಮಾರಂಭವನ್ನು ಉದ್ಘಾಟಿಸುವರು, ಶಿರಾ ತಾಲ್ಲೂಕು ಶ್ರೀ ಕನಕ ಪತ್ತಿನ ಸಹಕಾರ ಸಂಘದ ಆರ್.ಡಿ. ಮಂಜುನಾಥ್ ಅಧ್ಯಕ್ಷತೆ ವಹಿಸುವರು

ಆರ್ಯವೈಶ್ಯ ಕೋ–ಆಪರೇಟಿವ್ ಬ್ಯಾಂಕ್ ಸಂಸ್ಥಾಪಕ ಅಧ್ಯಕ್ಷ ಇನ್ನಿಲ್ಲ

ಹುಳಿಯಾರು

ಹುಳಿಯಾರಿನ ಆರ್ಯವೈಶ್ಯ ಕೋ–ಆಪರೇಟಿವ್ ಬ್ಯಾಂಕ್ ಸಂಸ್ಥಾಪಕ ಅಧ್ಯಕ್ಷ ಬಿ.ಎ.ವೆಂಕಟಚಲಪತಿ ಶೆಟ್ಟಿ (95) ಅವರು ಭಾನುವಾರ ಮುಂಜಾನೆ ನಿಧನರಾಗಿದ್ದಾರೆ.

ಇಲ್ಲಿನ ಶ್ರೀ ಪ್ರಸನ್ನ ಗಣಪತಿ ದೇವಾಲಯ ಸಮಿತಿ ಅಧ್ಯಕ್ಷರಾಗಿ, ಆರ್ಯವೈಶ್ಯ ಮಂಡಳಿ ನಿರ್ದೇಶಕರಾಗಿ ಮೃತರು ಸೇವೆ ಸಲ್ಲಿಸಿದ್ದಾರೆ. ಮೃತರು ಎಂದಿನಂತೆ ಸ್ವಗೃಹದಲ್ಲಿ ರಾತ್ರಿ ಮಲಗಿದ್ದವರು ಮುಂಜಾನೆ 7 ಆದರೂ ಎದ್ದಿಲ್ಲ. ಕುಟುಂಬ ವರ್ಗದವರು ಎಬ್ಬಿಸಲು ನೋಡಿದಾಗ ಮೃತಪಟ್ಟಿದ್ದಾರೆ.

ಮೃತರು 4 ಮಂದಿ ಮಕ್ಕಳು, 6 ಮಂದಿ ಮೊಮ್ಮಕ್ಕಳು, 6 ಮಂದಿ ಮರಿಮೊಕ್ಕಳು ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯ ಸಂಸ್ಕಾರವು ಸಂಜೆ ಮುಕ್ತಿಧಾಮದಲ್ಲಿ ನೆರವೇರಿತು.

ಇತರರ ಏಳಿಗೆಯನ್ನು ಪ್ರೋತ್ಸಾಹಿಸಿ–ಸ್ಫೂರ್ತಿಯಾಗಿ ಸ್ವೀಕರಿಸಿ

ತುಮಕೂರು

ಆರ್ಯಭಾರತಿ ಪಾಲಿಟೆಕ್ನಿಕ್.
ಸರ್ ಎಂ. ವಿಶ್ವೇಶ್ವರಯ್ಯ ಸಭಾಂಗಣ
ARYABHARATHI POLYTECHNIC,
S. T. E. STUDENTS' CHAPTER
"ABHIMAAN"

ಸಮಾಜದಲ್ಲಿ ಮಾದರಿಯುತ ಮನುಷ್ಯನಾಗಬೇಕೆಂದರೆ, ಮೊದಲು ನಮ್ಮ ನೆರೆಹೊರೆಯವರ ಏಳಿಗೆ ಹಾಗು ಸಾಧನೆಗಳನ್ನು ಪ್ರೋತ್ಸಾಹಿಸುವುದರೊಂದಿಗೆ, ಸ್ಫೂರ್ತಿಯ ಚಿಲುಮೆಯಾಗಿ ಸ್ವೀಕರಿಸಿಬೇಕೆಂದು ಬೆಂಗಳೂರಿನ ಪ್ರಖ್ಯಾತ ವ್ಯಕ್ತಿತ್ವ ವಿಕಸನ ತರಬೇತುದಾರರಾದ ಶ್ರೀಮತಿ ಮಧು ಜಗದೀಶ್‌ರವರು ಅಭಿಪ್ರಾಯ ವ್ಯಕ್ತಪಡಿಸಿದರು.

ಅವರು ನಗರದ ಆರ್ಯಭಾರತಿ ಪಾಲಿಟೆಕ್ನಿಕ್‌ನ ಸರ್ ಎಂ ವಿಶ್ವೇಶ್ವರಯ್ಯ ಸಭಾಂಗಣದಲ್ಲಿ ಸಂಸ್ಥೆಯ ಉಪನ್ಯಾಸಕರಿಗಾಗಿ ಆಯೋಜಿಸಿದ್ದ ಅನಾಲಿಟಕಲ್ ಇನ್‌ಸೈಟ್ಸ್ ಎಬೌಟ್ ಲೈಫ್ (ಒಳಗಣ್ಣಿನಿಂದ ಜೀವನದ ತುಲನೆ) ಕುರಿತಾದ ಒಂದು ದಿನದ ವಿಚಾರ ಸಂಕಿರಣದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡಿದರು.

ಪ್ರತಿಯೊಬ್ಬರಿಗೂ ಅವರದೇ ಆದ ವೈಯಕ್ತಿಯ ಸವಾಲುಗಳಿದ್ದು ಅವುಗಳನ್ನು ಸುಲಭವಾಗಿ ಎದುರಿಸಿ ಸಾಮಾನ್ಯರ ಮಧ್ಯೆ ಅಸಾಮಾನ್ಯ ಸಾಧಕರಾಗಲು ಮಾನವೀಯ ಮೌಲ್ಯಗಳ ಅಳವಡಿಕೆ ಹಾಗು ಪಾಲನೆ ಅತ್ಯವಶ್ಯಕವಾಗಿರುತ್ತದೆ ಎಂದು ತಿಳಿ ಹೇಳಿದರು. ಜೀವನದ ಪ್ರತೀ ಮಜಲುಗಳಲ್ಲಿ ನಿಸ್ವಾರ್ಥತೆಯನ್ನು ಮೈಗೂಡಿಸಿಕೊಂಡು ತಾನು ಬೆಳೆಯುವುದರೊಂದಿಗೆ ಇತರರನ್ನೂ ಕೂಡ ಉತ್ತಮ ದಾರಿಯಲ್ಲಿ ಕರೆದೊಯ್ಯುವಾಗಲೇ ಬದುಕಿಗೆ ಪರಿಪೂರ್ಣ ಅರ್ಥ ಹಾಗು ಗೌರವಾದಾರಗಳು ಒಲಿಯುತ್ತವೆ ಎಂದು ವಾಸ್ತವಾಂಶ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಪ್ರಾಚಾರ್ಯರಾದ ಶ್ರೀ ಕೆ. ಆರ್. ಅಶೋಕರವರು ಮಾತನಾಡಿ, ಪ್ರಸ್ತುತ ಸನ್ನಿವೇಶದಲ್ಲಿ ಮನುಷ್ಯರ ನಡುವೆ ಇರುವ ಪರಸ್ಪರ ಉತ್ತಮ ಬಾಂಧವ್ಯ ತೀರ ವಿರಳವಾಗುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು. ಇದರೊಂದಿಗೆ, ಜನರು ತಮ್ಮಗಳ ನಡುವೆ ಇರುವ ವೈಮನಸ್ಸುಗಳನ್ನು ಬದಿಗೊತ್ತಿ ಹಾಗು ತಾವು ಮಾಡಿರುವ ಕೆಲಸಗಳಿಗೆ ಪ್ರತಿಫಲವಾಗಿ ಯಾವ ಹೊಗಳಿಕೆಯನ್ನು ಬಯಸದೇ ನ್ಯಾಯಯುತ ಮಾರ್ಗದಲ್ಲಿ ನಡೆದು ಇತರರಿಗೆ ಸ್ಫೂರ್ತಿಯಾಗಬೇಕೆಂದು ಕರೆ ನೀಡಿದರು.

ಈ ವಿಚಾರ ಸಂಕಿರಣದಲ್ಲಿ ಶ್ರೀಮತಿ ಮಧು ಜಗದೀಶ್‌ರವರು ವಿವಿಧ ಮಾನವೀಯ ಮೌಲ್ಯಗಳು, ವಿದ್ಯಾರ್ಥಿ ಮತ್ತು ವೈಯಕ್ತಿಕ ಜೀವನದ ಮಜಲುಗಳು, ಸಾಮಾನ್ಯ ಹಾಗು ಅಸಾಮಾನ್ಯ ಸಾಧಕರ ನಡುವಿನ ವ್ಯತ್ಯಾಸ ಮತ್ತು ದೈನಂದಿನ ಜೀವನ ಕ್ರಮಕ್ಕೆ ಸಂಬಂಧಿಸಿದ ಇನ್ನಿತರೇ ಪ್ರಾಮುಖ್ಯಪೂರ್ಣ ವಿಷಯಗಳ ಬಗ್ಗೆ ಪೂರಕ ಪ್ರಾತ್ಯಕ್ಷಿಕೆಗಳೊಂದಿಗೆ ಸವಿಸ್ತಾರವಾಗಿ ವಿವರಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಆಡಳಿತಮಂಡಳಿಯ ನಿರ್ದೇಶಕರಾದ ಶ್ರೀ ಮಂಜುನಾಥರವರು,

ಉಪಪ್ರಾಂಶುಪಾಲರಾದ ಶ್ರೀ ಬಿ. ವಿ. ರಾಜೇಂದ್ರಕುಮಾರ್‌ರವರು, ವಿವಿಧ ವಿಭಾಗಗಳ ಮುಖ್ಯಸ್ಥರು ಹಾಗು ಉಪನ್ಯಾಸಕರ ವೃಂದದವರು ಉಪಸ್ಥಿತರಿದ್ದರು.